# ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ

ನಂ.32, 3ನೇ ಮಹಡಿ, ಡಿ. ದೇವರಾಜ ಅರಸ್ ರಸ್ತೆ, (ರೇಸ್‌ಕೋರ್ಸ್ ರಸ್ತೆ),
ಬೆಂಗಳೂರು – 560 001. ದೂರವಾಣಿ: 22268018/19 E-mail: kscfceds@gmail.com

**ನಂ:ಸಶಿವಿ/125/2022-23** **ದಿನಾಂಕ: 12.11.2022**

**ಗೆ:**

**ಉಪಕುಲಪತಿಗಳು/ವಿದ್ಯಾರ್ಥಿ ಕ್ಷೇಮಪಾಲಕರು,**

ಮಾನಸ ಗಂಗೋತ್ರಿ **ವಿಶ್ವವಿದ್ಯಾಲಯ,**

ಮೈಸೂರು

**ಮಾನ್ಯರೇ,**

**ವಿಷಯ** : 2022-23ನೇ ಸಾಲಿನ ಅಂತರ ವಿಶ್ವವಿದ್ಯಾಲಯದ ಪದವಿ (ಯು.ಜಿ) ಹಾಗೂ ಸ್ನಾತಕೋತ್ತರ (ಪಿ.ಜಿ.) ವಿದ್ಯಾರ್ಥಿಗಳಿಗೆ **"ಸಹಕಾರ ವಿಷಯ"** ಕುರಿತ ಚರ್ಚಾಸ್ಪರ್ಧೆಯನ್ನು ಏರ್ಪಡಿಸುವ ಕುರಿತಂತೆ.

–0–0–0–

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳನ್ನು ತಮ್ಮ ಮುಂದಿನ ಕ್ರಮಕ್ಕಾಗಿ ತರಲಾಗಿದೆ.

DSW-2 23/11/2022

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ಸಹಕಾರ ಚಳುವಳಿಯ ಅಭಿವೃದ್ಧಿಗೆ ಪೂರಕವಾದ ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರದ ಹೊಣೆಹೊತ್ತ ರಾಜ್ಯಮಟ್ಟದ ಮಾತ್ರ ಸಂಸ್ಥೆಯಾಗಿದೆ. ಇದು ಸಹಕಾರ ಚಳುವಳಿಯ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಿಕೊಂಡು, ಅವುಗಳನ್ನು ಕಾರ್ಯಗತಗೊಳಿಸುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಭವಿಷ್ಯದ ಯುವಜನರಿಗೆ ಸಕ್ರೀಯವಾಗಿ ಭಾಗವಹಿಸಿ ಸಹಕಾರ ಚಳುವಳಿಯನ್ನು ಯಶಸ್ವಿಗೊಳಿಸಲು ಸಾಧ್ಯವಾಗುವಂತೆ ಮುಂದಾಳತ್ವ, ನಾಯಕತ್ವ ವಹಿಸುವುದಕ್ಕೆ ಪ್ರೇರೇಪಿಸುವ ಉದ್ದೇಶದಿಂದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸಹಕಾರ ಕುರಿತ ಪ್ರಬಂಧ ಸ್ಪರ್ಧೆಯನ್ನು, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾಸ್ಪರ್ಧೆಯನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಪ್ರತಿ ವರ್ಷ ನಡೆಸುತ್ತಾ ಬಂದಿದೆ. ಅಂತೆಯೇ 2022-23ನೇ ಸಾಲಿನಲ್ಲಿ ತಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸಹಕಾರ ಕುರಿತು ಚರ್ಚಾ ಸ್ಪರ್ಧೆಯನ್ನು ನಡೆಸಲು ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲಾಗಿದೆ.

**2ನೇ ಪುಟಕ್ಕೆ . . .**

ತಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಅಂತರ ಕಾಲೇಜು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಸಹಕಾರ ಕುರಿತು ಚರ್ಚಾ ಸ್ಪರ್ಧೆಯನ್ನು ನಡೆಸಲು ಪ್ರತಿಯೊಂದು ವಿಶ್ವವಿದ್ಯಾಲಯಕ್ಕೆ ರೂ. 30,000/- ಗಳನ್ನು ಬಿಡುಗಡೆ ಮಾಡಿದೆ.

ಈ ರೀತಿ ಏರ್ಪಡಿಸಿದ ಅಂತರ ಕಾಲೇಜು ಮಟ್ಟದ ಮತ್ತು ವಿಶ್ವವಿದ್ಯಾಲಯ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಜಯಶೀಲರಾಗುವ ಮೊದಲ ಇಬ್ಬರು ಪದವಿ ವಿದ್ಯಾರ್ಥಿಗಳನ್ನು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು (ಒಬ್ಬರು ವಿಷಯದ ಪರವಾಗಿ ಮತ್ತೊಬ್ಬರು ವಿಷಯದ ವಿರುದ್ಧವಾಗಿ ಮಂಡನೆ ಮಾಡುವ ಹೆಸರನ್ನು ಸ್ಪಷ್ಟವಾಗಿ ನಮೂದಿಸಿ) ಸಹಕಾರ ಮಹಾಮಂಡಳವು ರಾಜ್ಯಮಟ್ಟದಲ್ಲಿ ಏರ್ಪಡಿಸುವ ಅಂತರ ಕಾಲೇಜು ಮಟ್ಟದ ಮತ್ತು ವಿಶ್ವವಿದ್ಯಾಲಯ ಮಟ್ಟದ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳ ಹೆಸರು ಮತ್ತು ವಿಳಾಸವನ್ನು ದಿನಾಂಕ: 15.12.2022ರೊಳಗಾಗಿ ಕಳುಹಿಸಿ ಕೊಡಲು ಕೋರಿದೆ.

**ಚರ್ಚಾಸ್ಪರ್ಧೆಯ ವಿಷಯ ಆಯ್ಕೆಯನ್ನು ತಮ್ಮ ವಿವೇಚನೆಗೆ ಬಿಡಲಾಗಿದೆ. ವಿಷಯದ ಆಯ್ಕೆಗೆ ಅನುಕೂಲವಾಗುವಂತೆ ಕೆಲವು ಮಾದರಿ ವಿಷಯಗಳ ಪಟ್ಟಿಯನ್ನು ತಮ್ಮ ಮಾಹಿತಿಗಾಗಿ ಲಗತ್ತಿಸಿದೆ.**

ಮೇಲ್ಕಂಡ ಚರ್ಚಾಸ್ಪರ್ಧೆಯಲ್ಲಿ ವಿಜೇತರಾಗುವ **"<u>ಪದವಿ</u>"** ವಿದ್ಯಾರ್ಥಿಗಳಿಗೆ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದಿಂದ ರಾಜ್ಯಮಟ್ಟದಲ್ಲಿ ನಡೆಸಲಾಗುವ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದಲ್ಲಿ ಈ ಕೆಳಕಂಡಂತೆ ನಗದು ರೂಪದಲ್ಲಿ ಮೂರು ಬಹುಮಾನವನ್ನು ನೀಡಲಾಗುವುದು.

| | | |
|---|---|---|
| 01. | ಪ್ರಥಮ ಬಹುಮಾನ | ರೂ. 4,000.00 |
| 02. | ದ್ವಿತೀಯ ಬಹುಮಾನ | ರೂ. 3,000.00 |
| 03. | ತೃತೀಯ ಬಹುಮಾನ | ರೂ. 2,000.00 |

ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

**3ನೇ ಪುಟಕ್ಕೆ.....**

ಹಾಗೇಯೇ ರಾಜ್ಯಮಟ್ಟದಲ್ಲಿ "<u>ಸ್ನಾತಕೋತ್ತರ ಪದವಿ</u>" ವಿದ್ಯಾರ್ಥಿಗಳ ಚರ್ಚಾಸ್ಪರ್ಧೆಯಲ್ಲಿ ವಿಜೇತರಾದವರಿಗೆ ಈ ಕೆಳಕಂಡಂತೆ ನಗದು ರೂಪದಲ್ಲಿ ಮೂರು ಬಹುಮಾನವನ್ನು ನೀಡಲಾಗುವುದು.

| | | |
|---|---|---|
| 01. | ಪ್ರಥಮ ಬಹುಮಾನ | ರೂ. 5,000.00 |
| 02. | ದ್ವಿತೀಯ ಬಹುಮಾನ | ರೂ. 4,000.00 |
| 03. | ತೃತೀಯ ಬಹುಮಾನ | ರೂ. 3,000.00 |

ವಿಜೇತರಾದ ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿ ಪರ್ಯಾಯ ಪಾರಿತೋಷಕವನ್ನು ನೀಡಲಾಗುವುದು.

ನಿಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಆಯ್ಕೆಯಾದ ಪದವಿಯ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಚರ್ಚಾಸ್ಪರ್ಧೆ ನಡೆಸುವ ದಿನಾಂಕವನ್ನು ಮತ್ತು ವಿಷಯ, ಇತ್ಯಾದಿ ವಿವರಗಳನ್ನು ಮುಂದೆ ತಿಳಿಸಲಾಗುವುದು.

ರಾಜ್ಯಮಟ್ಟದ ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಯ ಜೊತೆಗೆ, ಬಂದು ಹೋಗುವ ಪ್ರಯಾಣ ಭತ್ಯೆಯನ್ನು ವಿಶ್ವವಿದ್ಯಾಲಯ ಕಾರ್ಯನಿರ್ವಹಿಸುತ್ತಿರುವ ಸ್ಥಳದಿಂದ ನೀಡಲಾಗುವುದು. (ಎರಡನೇ ದರ್ಜೆ ರೈಲು ದರ ಅಥವಾ ಸಾಮಾನ್ಯ ಬಸ್ಸಿನ ಚಾರ್ಜನ್ನು ನೀಡಲಾಗುವುದು. ವಿದ್ಯಾರ್ಥಿಗಳು ಪ್ರಯಾಣ ಭತ್ಯೆಯನ್ನು ಪಡೆಯುವಾಗ ರೈಲು ಅಥವಾ ಬಸ್ಸಿನ ಟಿಕೇಟನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗುತ್ತದೆ.)

2022–23ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಸಲಾಗುವ ಚರ್ಚಾ ಸ್ಪರ್ಧೆಯ ವೆಚ್ಚಕ್ಕಾಗಿ ರೂ. 30,000/– (ರೂಪಾಯಿ ಮೂವತ್ತು ಸಾವಿರ ಮಾತ್ರ)ಗಳನ್ನು ಬ್ಯಾಂಕಿನ ಡಿ.ಡಿ. ಯನ್ನು ಈ ಪತ್ರದ ಜೊತೆ ಲಗತ್ತಿಸಲಾಗಿದೆ. ಹಣ ಸಂದಾಯ ರಶೀದಿ ಹಾಗೂ ಚರ್ಚಾಸ್ಪರ್ಧೆ ನಡೆಸಿದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು

<u>ಲಗತ್ತು :–</u>

1. ಮಾದರಿ ವಿಷಯ ಪಟ್ಟಿ.
2. ಬ್ಯಾಂಕಿನ ಚೆಕ್.

<u>ಪ್ರತಿಯನ್ನು:–</u>

01. ವಿದ್ಯಾರ್ಥಿ ಕ್ಷೇಮಪಾಲಕರು, ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಇವರುಗಳಿಗೆ ವಿಷಯದ ಮಾಹಿತಿಗಾಗಿ ಕಳುಹಿಸುತ್ತಾ ಸಹಕಾರ ಕುರಿತ ಚರ್ಚಾಸ್ಪರ್ಧೆಯನ್ನು ನಡೆಸಲು ವಿನಂತಿಸಲಾಗಿದೆ.

4ನೇ ಪುಟಕ್ಕೆ.....



02. ರಾಜ್ಯದ ಎಲ್ಲಾ ಕೆ.ಐ.ಸಿ.ಎಂ.ಗಳ ಪ್ರಾಂಶುಪಾಲರುಗಳಿಗೆ ವಿಷಯದ ಮಾಹಿತಿಗಾಗಿ ಹಾಗೂ ನಿಮ್ಮ ತರಬೇತಿ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು ನಡೆಸಲಿರುವ ಸಹಕಾರ ಕುರಿತು ಚರ್ಚಾಸ್ಪರ್ಧೆಗೆ ನಿಮ್ಮ ಸಹಕಾರವನ್ನು ನೀಡಿ ಸಂಘಟಿಸಲು ಕ್ರಮ ಕೈಗೊಳ್ಳುವುದು ಹಾಗೂ ಚರ್ಚಾಸ್ಪರ್ಧೆ ನಡೆಸಿರುವ ಬಗ್ಗೆ ದೃಢೀಕರಣ ಪತ್ರ, ಹಣಸಂದ ರಶೀದಿ ಹಾಗೂ ವಿಶ್ವವಿದ್ಯಾಲಯದಿಂದ ವೆಚ್ಚ ಮಾಡಿದ ಲೆಕ್ಕಪತ್ರಗಳನ್ನು ಕೇಂದ್ರ ಕಛೇರಿಗೆ ಕಳುಹಿಸುವ ವ್ಯವಸ್ಥೆ ಮಾಡುವುದು.

03. ರಾಜ್ಯದ ಎಲ್ಲಾ ಜಿಲ್ಲಾ ಸಹಕಾರ ಯೂನಿಯನ್ನುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ವಿಷಯದ ಮಾಹಿತಿಗಾಗಿ ಹಾಗೂ ನಿಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳು ಸಹಕಾರ ಕುರಿತು ಚರ್ಚಾಸ್ಪರ್ಧೆಯನ್ನು ಸಕಾಲದಲ್ಲಿ ನಡೆಸಿ, ವಿಜೇತರಾದ ವಿದ್ಯಾರ್ಥಿಗಳ ಹೆಸರನ್ನು ಕೇಂದ್ರ ಕಛೇರಿಗೆ ಸಲ್ಲಿಸುವಂತೆ ಅನುಸರಣಾ ಕ್ರಮ ಕೈಗೊಳ್ಳುವುದು.

04. ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳ ವಿಷಯದ ಮಾಹಿತಿಗಾಗಿ ಕಳುಹಿಸಿದೆ.

ವ್ಯವಸ್ಥಾಪಕ ನಿರ್ದೇಶಕರು

# ಚರ್ಚಾ ಸ್ಪರ್ಧೆಗಳಿಗೆ ಮಾದರಿ ವಿಷಯ ಪಟ್ಟಿ

- ವಿಶ್ವದ ಅರ್ಥವ್ಯವಸ್ಥೆ ಸುಭದ್ರಗೊಳ್ಳಲು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ. PG

- ಭಾರತದ ಆರ್ಥಿಕ, ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಹಕಾರಿ ಚಳವಳಿಯನ್ನು ಬಲಗೊಳಿಸುವುದೊಂದೇ ದಾರಿ.

- ಶಾಲಾ ಕಾಲೇಜು ಪಠ್ಯದಲ್ಲಿ ಸಹಕಾರ ವಿಷಯ ಸೇರಿಸುವುದು, ಸಹಕಾರಿ ವಿಶ್ವವಿದ್ಯಾಲಯ ಸ್ಥಾಪನೆ ಮಾಡುವುದರಿಂದ ಮಾತ್ರವೇ ರಾಷ್ಟ್ರದ ಸಹಕಾರಿ ಚಳವಳಿ ಬೆಳೆಯಬಲ್ಲದು.

- ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗಸೃಷ್ಟಿ, ಗ್ರಾಮೀಣ ಅಭಿವೃದ್ಧಿಯ ಗುರಿ ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾಯ ವ್ಯವಸ್ಥೆ ಇಲ್ಲ. UG

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

**ಮಾನಸಗಂಗೋತ್ರಿ, ಮೈಸೂರು – 570 006**

ದೂರವಾಣಿ :0821-2419318/386/429

e-mail : dswuommgm@gmail.com


ಸಂಖ್ಯೆ: ವಿಕ್ಷೇಪಾ.2/24/ 1778 /2019-20

ದಿನಾಂಕ: 30-01-2023

# ಸುತ್ತೋಲೆ

ವಿಷಯ: 2022-23ನೇ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 'ಸಹಕಾರ' ವಿಷಯ ಕುರಿತು ಕನ್ನಡ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು, ಇವರ ಸಹಯೋಗದಲ್ಲಿ 'ಸಹಕಾರ' ಕುರಿತು ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯನ್ನು **ದಿನಾಂಕ: 16-02-2023ರ ಬೆಳಗ್ಗೆ 10.30 ಗಂಟೆಗೆ ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು** ಇಲ್ಲಿ ಏರ್ಪಡಿಸಲಾಗಿದೆ.

ಈ ಸ್ಪರ್ಧೆಗೆ ಪ್ರತಿ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು. ಚರ್ಚಾ ಸ್ಪರ್ಧೆಯ ವಿಷಯದ ಪರವಾಗಿ ಒಬ್ಬರು, ವಿರೋಧವಾಗಿ ಮತ್ತೊಬ್ಬರು ಮಾತನಾಡಬೇಕು. ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೂರು ನಗದು ಬಹುಮಾನಗಳನ್ನು ನೀಡಲಾಗುವುದು (ಪ್ರಥಮ, ದ್ವಿತೀಯ ಮತ್ತು ತೃತೀಯ). ವಿಷಯದ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿ ಪ್ರಥಮ ಸ್ಥಾನ ಪಡೆದ ತಲಾ ಇಬ್ಬರು ಸ್ನಾತಕ ಹಾಗೂ ಇಬ್ಬರು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಅಂತರ ವಿಶ್ವವಿದ್ಯಾನಿಲಯ ಮಟ್ಟದ ಚರ್ಚಾ ಸ್ಪರ್ಧೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಲಾಗುವುದು.

ಸ್ಪರ್ಧೆಗೆ 05 ನಿಮಿಷಗಳ (4+1) ಕಾಲಾವಕಾಶವಿರುತ್ತದೆ. ಸ್ಪರ್ಧೆಯ ವಿಷಯವನ್ನು ಕನ್ನಡದಲ್ಲೇ ಮಾತನಾಡಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಯೋಮಿತಿಯು ದಿನಾಂಕ: 16-02-2023ಕ್ಕೆ 25 ವರ್ಷಗಳನ್ನು ಮೀರಿರಬಾರದು (ಈ ಬಗ್ಗೆ ಪ್ರಮಾಣ ಪತ್ರ ಅಗತ್ಯ). ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಕಾಲೇಜಿನ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರ ಮುಖಾಂತರ **ದಿನಾಂಕ: 14-02-2023ರ** ಒಳಗಾಗಿ ಈ ನಿರ್ದೇಶನಾಲಯದ ಇ-ಮೇಲ್‌ಗೆ ತಲುಪುವಂತೆ ಕಳುಹಿಸಲು ಕೋರಿದೆ. ಪರ ಸ್ಥಳದಿಂದ ಬರುವಂತಹ ವಿದ್ಯಾರ್ಥಿಗಳು ತಮ್ಮ ಪ್ರಯಾಣದ ರೈಲು ಅಥವಾ ಬಸ್ ಸಂಚಾರದ ಟಿಕೇಟ್‌ಗಳನ್ನು ಹಾಜರುಪಡಿಸಿ ಪ್ರಯಾಣ ದರವನ್ನು ಪಡೆಯಬಹುದು.

>>>>>>>>2

## ಚರ್ಚಾ ಸ್ಪರ್ಧೆಯ ವಿಷಯ

**ಸ್ನಾತಕ ಪದವಿ (ಯು.ಜಿ.) ವಿದ್ಯಾರ್ಥಿಗಳಿಗೆ:**

**"ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗಸೃಷ್ಠಿ, ಗ್ರಾಮೀಣ ಅಭಿವೃದ್ಧಿಯ ಗುರಿ ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾಯ ವ್ಯವಸ್ಥೆ ಇಲ್ಲ. "**

**ಸ್ನಾತಕೋತ್ತರ ಪದವಿ (ಪಿ.ಜಿ.) ವಿದ್ಯಾರ್ಥಿಗಳಿಗೆ:**

**"ವಿಶ್ವದ ಅರ್ಥವ್ಯವಸ್ಥೆ ಸುಭದ್ರಗೊಳ್ಳಲು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ."**

ಮೇಲ್ಕಂಡ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹೆಸರಿನ ಮುಂದೆ, ವಿಷಯದ ಪರ ಅಥವಾ ವಿರೋಧ ಎಂಬುದನ್ನು ನಮೂದಿಸಿ ಕಳುಹಿಸಬೇಕು. **ಸ್ಪರ್ಧಾರ್ಥಿಗಳ ಮೊಬೈಲ್ ಸಂಖ್ಯೆ ಹಾಗೂ ಕಾಲೇಜಿನ ದೂರವಾಣಿ ಸಂಖ್ಯೆಯನ್ನೂ ಕಡ್ಡಾಯವಾಗಿ ನಮೂದಿಸತಕ್ಕದ್ದು.**

(ಡಾ. ಬಿ.ಎಸ್. ಚಂದ್ರಶೇಖರ)
ನಿರ್ದೇಶಕ
DIRECTOR OF STUDENT WELFARE
UNIVERSITY OF MYSORE, MYSURU
30/1/23

ಗೆ,

1. ಮೈಸೂರು ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ.
2. ಪ್ರಾಂಶುಪಾಲರು, ಸಹಕಾರ ತರಬೇತಿ ಕೇಂದ್ರ, ಚಾಮರಾಜ ಜೋಡಿ ರಸ್ತೆ, ಮೈಸೂರು.
3. ಕಚೇರಿ ಕಡತಕ್ಕೆ.

***ವಿಶೇಷ ಸೂಚನೆ:*** 1. ವಿದ್ಯಾರ್ಥಿಗಳು ತಮ್ಮ ಕಾಲೇಜಿನ/ವಿಭಾಗದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
2. ವಿದ್ಯಾರ್ಥಿಗಳು ತಮ್ಮ ವಯಸ್ಸಿನ ಬಗ್ಗೆ ಪ್ರಾಂಶುಪಾಲರಿಂದ/ವಿಭಾಗದ ಅಧ್ಯಕ್ಷರಿಂದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರಬೇಕು.

ತೆರೆದ ಅಂಚೆ

# ಮೈಸೂರು ವಿಶ್ವವಿದ್ಯಾನಿಲಯ

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು
ಹಾಗೂ
ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು

ಇವರ ಸಹಯೋಗದಲ್ಲಿ

## 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತ ಕನ್ನಡ ಚರ್ಚಾ ಸ್ಪರ್ಧೆ

## ಉದ್ಘಾಟನಾ ಸಮಾರಂಭ

**ಉದ್ಘಾಟನೆ**

ಡಾ|| ಜಿ. ಉಮೇಶ್, ಕೆ.ಸಿ.ಎಸ್.
ಸಹಕಾರ ಸಂಘಗಳ ಜಂಟಿ ನಿಬಂಧಕರು
ಮೈಸೂರು ವಿಭಾಗ, ಮೈಸೂರು

**ಅಧ್ಯಕ್ಷತೆ :**

ಪ್ರೊ. ಗೋಪಾಲಪ್ಪ ಡಿ.ವಿ.
ಪ್ರಾಧ್ಯಾಪಕರು,
ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮಾನಸಗಂಗೋತ್ರಿ, ಮೈಸೂರು

**ಮುಖ್ಯ ಅತಿಥಿಗಳು :**

ಶ್ರೀ ಚಂದ್ರಶೇಖರ್
ಪ್ರಾಂಶುಪಾಲರು
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಅಪರೇಟಿವ್ ಮ್ಯಾನೇಜ್‌ಮೆಂಟ್, ಮೈಸೂರು

**ಉಪಸ್ಥಿತರು :**

ಪ್ರೊ. ಎಸ್. ಮಹೇಂದ್ರ ಕುಮಾರ್
ನಿವೃತ್ತ ಪ್ರಾಧ್ಯಾಪಕರು
ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮಾನಸಗಂಗೋತ್ರಿ, ಮೈಸೂರು

---

**ದಿನಾಂಕ : 16-02-2023 ಗುರುವಾರ ಸಮಯ : ಬೆಳಗ್ಗೆ 10.30ಕ್ಕೆ**
**ಸ್ಥಳ : ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು**

---

ತಮ್ಮೆಲ್ಲರಿಗೂ ಆತ್ಮೀಯ ಸ್ವಾಗತ

ಡಾ|| ಸುಷ್ಮಾ ಎಸ್.ಎನ್.
ಸಹಾಯಕ ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

ಡಾ|| ಚಂದ್ರಶೇಖರ ಬಿ.ಎಸ್.
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

## 2022–23ನೇ ಸಾಲಿನ ಸ್ನಾತಕ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತ ಕನ್ನಡ ಚರ್ಚಾ ಸ್ಪರ್ಧೆಯ ವಿದ್ಯಾರ್ಥಿಗಳ ವಿವರ

**ವಿಷಯ: "ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಗ್ರಾಮೀಣ ಅಭಿವೃದ್ಧಿಯ ಗುರು ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾಯ ವ್ಯವಸ್ಥೆ ಇಲ್ಲ".**

ದಿನಾಂಕ: 16.02.2023

ಸ್ಥಳ: EMRC ಸಭಾಂಗಣ
EMRC ಕಟ್ಟಡ
ಮಾನಸಗಂಗೋತ್ರಿ, ಮೈಸೂರು

| ಕ್ರಮ ಸಂಖ್ಯೆ | ಕಾಲೇಜು/ವಿಭಾಗ | ವಿದ್ಯಾರ್ಥಿ ಹೆಸರು ಮತ್ತು ಮೊಬೈಲ್ ನಂ. | ತರಗತಿ | ಪಡೆದ ಅಂಕಗಳು |
|---|---|---|---|---|
| 1. | ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಮೈಸೂರು | 1. ಸುಪ್ರೀತ್ N<br>2. ಪ್ರಜ್ವಲ್ A.R | II B.A<br>II B.A | |
| 2. | ಎಂ.ಎಂ.ಕೆ ಮತ್ತು ಎಸ್.ಡಿ.ಎಂ ಕಾಲೇಜು, ಮೈಸೂರು | 1. ಕಾವ್ಯ. K<br>2. ಸೌಂದರ್ಯ H.N | III BBA<br>II B.Com | |
| 3. | ಜೆ.ಎಸ್.ಎಸ್ ಮಹಿಳಾ ಕಾಲೇಜು, ಚಾಮರಾಜನಗರ | 1. ಸಂಗೀತಾ G<br>2. ಲಕ್ಷ್ಮೀಶ್ರೀ V.P | III B.A<br>III B.A | |
| 4. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಗುಂಡ್ಲುಪೇಟೆ, ಚಾಮರಾಜನಗರ | 1. ಯೋಗೇಶ್. S<br>2. ಮಧುಸೂದನ್. G.N | III B.Sc<br>III B.Sc | |
| 5. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹುಲ್ಲಹಳ್ಳಿ, ಮೈಸೂರು | 1. ಸುದರ್ಶನ್ K.B<br>2. ರಾಜೇಶ್ವರ H.S | I BBA<br>I BBA | |
| 6. | ಪಿ.ಇ.ಎಸ್ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಕಾಲೇಜು, ಮಂಡ್ಯ | 1. ಮನೋಜಕುಮಾರ್. M<br>2. ಮೇಘನಾ. M | III B.Com<br>II BCA | |
| 7. | ಮಹಾರಾಜ ಕಾಲೇಜು ಮೈಸೂರು | 1. ಯೋಗೇಶ್. B.A<br>2. | II B.A | |
| 8. | ಸೇವಾಭಾರತಿ ಪ್ರಥಮ ದರ್ಜೆ ಕಾಲೇಜು, ಚಾಮರಾಜನಗರ | 1. ಶಿವಪ್ರಸಾದ್. S<br>2. ರಕ್ಷಿತ. K | III B.Com<br>II B.Com | |

2022–23ನೇ ಸಾಲಿನ ಸ್ನಾತಕ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತ
ಕನ್ನಡ ಚರ್ಚಾ ಸ್ಪರ್ಧೆಯ ವಿದ್ಯಾರ್ಥಿಗಳ ವಿವರ

**ವಿಷಯ: "ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಗ್ರಾಮೀಣ ಅಭಿವೃದ್ಧಿಯ ಗುರು ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾಯ ವ್ಯವಸ್ಥೆ ಇಲ್ಲ".**

ದಿನಾಂಕ: 16.02.2023

ಸ್ಥಳ: EMRC ಸಭಾಂಗಣ
EMRC ಕಟ್ಟಡ
ಮಾನಸಗಂಗೋತ್ರಿ, ಮೈಸೂರು

| ಕ್ರಮ ಸಂಖ್ಯೆ | ಕಾಲೇಜು/ವಿಭಾಗ | ವಿದ್ಯಾರ್ಥಿ ಹೆಸರು ಮತ್ತು ಮೊಬೈಲ್ ನಂ. | ತರಗತಿ | ಪಡೆದ ಅಂಕಗಳು |
|---|---|---|---|---|
| 9. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು. H.D ಕೋಟೆ | 1. ಯಸ್ಮೀನ<br>2. ಸಮೀನಾ | I BA<br>III BBA | |
| 10. | ಆಚಾರ್ಯ ಪ್ರಥಮ ದರ್ಜೆ ಕಾಲೇಜು, ಹಾಸನ | 1. ಅನುಪ್. J<br>2. ಸಿಂಚನ H.Y | II BCA<br>II BCA | |
| 11 | ಸರ್ಕಾರಿ ಕಲಾ. ವಾಣಿಜ್ಯ ಮತ್ತು PG ಕಾಲೇಜು - ಸ್ವಾಯತ್ತ. ಹಾಸನ | 1. ಸಾಗರ್. S<br>2. ಕಿರಣರಾಜ್ H.K | III B.A<br>III B.A | |
| 12. | ಸಮಾಜಕಾರ್ಯ ಅಧ್ಯಯನ ವಿಭಾಗ, ಮಾನಸಗಂಗೋತ್ರಿ. ಮೈಸೂರು | 1. ಪ್ರಗತಿ. K.S<br>2. ನಿಶಾಂತ್. C | I BSW<br>I BSW | |
| 13. | ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು | 1. ಯಶಸ್<br>2. ನಾಗಲಕ್ಷ್ಮೀ | | |
| 14. | ಜೆ.ಎಸ್.ಎಸ್ ಬಿ.ಇಡಿ ಕಾಲೇಜು ಮೈಸೂರು | 1. ಚಂದನ H.K<br>2. ಚೇತನ C.E | I B.ed<br>I B.ed | |
| 15 | ಶ್ರೀ [illegible] [illegible] | 1. [illegible]<br>8746097814 | I B.ed | |
| 16 | ಎನ್. ಪಿ. ಎ ಪ್ರಥಮ ದರ್ಜೆ ಕಾಲೇಜು, ಮೈಸೂರು | 1. ಕಾರ್ತಿಕ್. ಎಸ್<br>2. ಪವನ್. ಎಸ್. ಜಿ | II BCOM<br>II BCA | |

2022–23ನೇ ಸಾಲಿನ ಸ್ನಾತಕ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತ
ಕನ್ನಡ ಚರ್ಚಾ ಸ್ಪರ್ಧೆಯ ವಿದ್ಯಾರ್ಥಿಗಳ ವಿವರ

**ವಿಷಯ: "ಭಾರತದಲ್ಲಿ ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಗ್ರಾಮೀಣ ಅಭಿವೃದ್ಧಿಯ ಗುರು ಮುಟ್ಟಲು ಸಹಕಾರಿ ವ್ಯವಸ್ಥೆಯನ್ನುಳಿದು ಪರ್ಯಾಯ ವ್ಯವಸ್ಥೆ ಇಲ್ಲ".**

ದಿನಾಂಕ: 16.02.2023

ಸ್ಥಳ: EMRC ಸಭಾಂಗಣ
EMRC ಕಟ್ಟಡ
ಮಾನಸಗಂಗೋತ್ರಿ, ಮೈಸೂರು

| ಕ್ರಮ ಸಂಖ್ಯೆ | ಕಾಲೇಜು/ವಿಭಾಗ | ವಿದ್ಯಾರ್ಥಿ ಹೆಸರು ಮತ್ತು ಮೊಬೈಲ್ ನಂ. | ತರಗತಿ | ಪಡೆದ ಅಂಕಗಳು |
|---|---|---|---|---|
| 17. | J.S.S. College, Ooty Road | 1) Harshitha. G.R<br>2) Kusuma Bai. R | IInd B.Com<br>IInd B.Sc | ! |
| | | | | |
| | | | | |
| | | | | |
| | | | | |
| | | | | |
| | | | | |
| | | | | |

[signature] Kusuma B.

2022–23ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತ
ಕನ್ನಡ ಚರ್ಚಾ ಸ್ಪರ್ಧೆಯ ವಿದ್ಯಾರ್ಥಿಗಳ ವಿವರ

**ವಿಷಯ: "ವಿಶ್ವದ ಅರ್ಥವ್ಯವಸ್ಥೆ ಸುಭದ್ರಗೊಳಿಸಲು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ".**

ದಿನಾಂಕ: 16.02.2023

ಸ್ಥಳ: EMRC ಸಭಾಂಗಣ
EMRC ಕಟ್ಟಡ
ಮಾನಸಗಂಗೋತ್ರಿ, ಮೈಸೂರು

| ಕ್ರಮ ಸಂಖ್ಯೆ | ಕಾಲೇಜು/ವಿಭಾಗ | ವಿದ್ಯಾರ್ಥಿ ಹೆಸರು ಮತ್ತು ಮೊಬೈಲ್ ನಂ. | ತರಗತಿ | ಪಡೆದ ಅಂಕಗಳು | |
|---|---|---|---|---|---|
| 1. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗ. ಮಾ.ಗಂ | 1. ದಿವ್ಯಶ್ರೀ H.M<br>2. ಅನುಶ್ರೀ | I M.A<br>I M.A | | [signature]<br>Anushree |
| 2. | ಸ್ನಾತಕೋತ್ತರ ಕೇಂದ್ರ, ಹಾಸನ | 1. [illegible]<br>2. ಭೂಮಿಕಾ M.K | | | |
| 3. | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, JLB, ಮೈಸೂರು | 1. ಭಾವನ. ಡಿ<br>2. ಗಗನ. D.g | I M.Sc<br>I M.Sc | | Bhavana<br>D.G.Gagan |
| 4. | ಭೌತಶಾಸ್ತ್ರ ಅಧ್ಯಯನ ವಿಭಾಗ ಮಾ.ಗಂ, ಮೈಸೂರು | 1. ಸುಚಿತ. ಡಿ. ಬೆಳಗೆರೆ | I M.Sc | | |
| 5. | ಸಮಾಜಕಾರ್ಯ ಅಧ್ಯಯನ ವಿಭಾಗ ಮಾ.ಗಂ, ಮೈಸೂರು | 1. ಸ್ಮಿತಾ<br>2. ಹೇಮಂತ್. ಬಿ | II MSW<br>II MSW | | Smitha<br>[signature] |
| 6. | ಗಣಕ ವಿಜ್ಞಾನ ಮಾ.ಗಂ., ಮೈಸೂರು | 1. ಮನೋಜ್ ಕುಮಾರ | II MCA | | [signature] |
| 7 | ವಾಣಿಜ್ಯ ವಿಭಾಗ ಮಾ.ಗಂ. ಮೈಸೂರು | 1. ಪೂಜಾ. ಎಸ್<br>2. ಪುಷ್ಪ ಎಚ್. ಸಿ | II. M.com<br>II. M.com | | Pooja.S<br>Pushpa H. |
| 8 | ಮನೋವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು | 1. ಏಕತಾ ಶಂಕರನಾರಾಯಣ ಭಟ್ಟ | II MSc | | Ekata |
| | | | | | |

P.G. Prize winners of Debate Competition 16/2/23

| | | | |
|---|---|---|---|
| I. | Ekatha Shankarnarayana Bhat | 22.50 | I |
| II | Anushree | 19.50 | II |
| III | Hemanth. B. (A) | 19.00 | III |

Judges

1. [signature]

2. [signature]

3. [signature]

[signature]

DIRECTOR OF STUDENT WELFARE
UNIVERSITY OF MYSORE, MYSURU

U.G. Prize winners of Debate Competition. 16/2/23

| | | | |
|---|---|---|---|
| 1. | Vivekananda. K. Baligar. | 22.5 | I |
| 2. | Yogesh. S. | 21.0 | II |
| 3. | Keerthiraj. H.K. (A) | 18.0 | III |

1.

2.

3.

DIRECTOR OF STUDENT WELFARE
UNIVERSITY OF MYSORE, MYSURU

ಮೈಸೂರು ವಿಶ್ವವಿದ್ಯಾನಿಲಯ

UNIVERSITY OF MYSORE

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು

ಹಾಗೂ

## ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು

ಇವರ ಸಂಯುಕ್ತ ಆಶ್ರಯದಲ್ಲಿ

# 2022-23ನೇ ಶೈಕ್ಷಣಿಕ ಸಾಲಿನ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಹಕಾರ ಕುರಿತ ಕನ್ನಡ ಚರ್ಚಾ ಸ್ಪರ್ಧೆ

# ಪ್ರಮಾಣ ಪತ್ರ

ಶ್ರೀ/ಶ್ರೀಮತಿ/ಕುಮಾರ/ಕುಮಾರಿ..........................................................................

.......................................................................................ಇವರು

ದಿನಾಂಕ: **16-02-2023**ರಂದು ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, ಇಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನಡೆದ 'ಸಹಕಾರ' ವಿಷಯ ಕುರಿತ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ..................................................... ಬಹುಮಾನ ಪಡೆದಿರುತ್ತಾರೆ.

**ಶ್ರೀ ಚಂದ್ರಶೇಖರ್**
ಪ್ರಾಂಶುಪಾಲರು
ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ-ಅಪರೇಟಿವ್ ಮ್ಯಾನೇಜ್‌ಮೆಂಟ್, ಮೈಸೂರು

**ಡಾ॥ ಚಂದ್ರಶೇಖರ ಬಿ.ಎಸ್.**
ನಿರ್ದೇಶಕರು
ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮೈಸೂರು ಮಿತ್ರ

ಮಂಗಳವಾರ 7 ನವೆಂಬರ್ 2023

# ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಯ ಬೆನ್ನೆಲುಬು

## ಸಹಕಾರ ತಜ್ಞ ಪ್ರೊ.ಮಹೇಂದ್ರ ಕುಮಾರ್ ಅಭಿಮತ



ಮೈಸೂರು,ನ.6(ಎಂಟಿವೈ)– ದೇಶದ ಜಿಡಿಪಿಯಲ್ಲಿ ಶೇ.13ರಷ್ಟು ಕೊಡುಗೆ ನೀಡುತ್ತಿರುವ ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಗೆ ಬೆನ್ನೆಲುಬಾಗಿದೆ ಎಂದು ಸಹಕಾರ ತಜ್ಞ ಪ್ರೊ.ಎಸ್.ಮಹೇಂದ್ರ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯವು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಸೋಮವಾರ ಆಯೋಜಿಸಿದ್ದ 'ಸಹಕಾರ' ಕುರಿತ ಚರ್ಚಾಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರದಲ್ಲಿ ರೈತರು, ಕಾರ್ಮಿಕರು, ಶ್ರಮಿಕ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ವರ್ಗದವರನ್ನು ಸಹಕಾರ ಕ್ಷೇತ್ರ ಸ್ವಾವಲಂಬಿಗಳನ್ನಾಗಿ ರೂಪಿಸುತ್ತಿದೆ. ಸಧೃಢವಾಗಿರುವ ಸಹಕಾರ ಕ್ಷೇತ್ರ ದೇಶದ ಅರ್ಥ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದೆ. ಇದರಿಂದಾಗಿ ಜಿಡಿಪಿಯಲ್ಲಿ ಶೇ.13ರಷ್ಟು ಸಹಕಾರ ಕ್ಷೇತ್ರದಿಂದ ಕೊಡುಗೆ ಲಭಿಸುತ್ತಿದೆ. ಬ್ರಿಟನ್‌ನ ಮ್ಯಾಂಚೆಸ್ಟರ್‌ನಲ್ಲಿ ಆರಂಭವಾದ ಸಹಕಾರ ಸಂಘಗಳ ಆಲೋಚನೆ ಜಗತ್ತಿನ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ ಎಂದರು.

ಕರ್ನಾಟಕದಲ್ಲಿ ಕೆಎಂಎಫ್, ಗುಜರಾತ್‌ನ ಅಮುಲ್ ಸೇರಿದಂತೆ ವಿವಿಧ ಹಾಲು ಒಕ್ಕೂಟಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಸವಾಲೊಡ್ಡುವಂತೆ ಬೆಳೆದು ನಿಂತಿವೆ. ಹೈನುಗಾರಿಕೆಯಷ್ಟೇ ಅಲ್ಲದೆ ಸಕ್ಕರೆ, ಖಾದಿ, ಸೆಣಬು, ಆಹಾರ ಧಾನ್ಯ, ರಸಗೊಬ್ಬರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಯೂ ಸಹಕಾರ ಸಂಘಗಳು ಸ್ಥಾಪಿಸಲಾಗಿದೆ.ರಾಜ್ಯದ ಉತ್ಪಾದನೆಯಾಗುತ್ತಿರುವ ನಂದಿನಿ ಉತ್ಪನ್ನಗಳು ಅಂತರರಾಷ್ಟ್ರೀಯ ಮನ್ನಣೆ ಗಳಿಸಿದೆ. ತಿರುಪತಿಯ ಲಡ್ಡು ತಯಾರಿಕೆಯಲ್ಲೂ ನಂದಿನಿ ತುಪ್ಪ ಬಳಸಲಾಗುತ್ತಿದೆ. ರೈತರನ್ನು ಸ್ವಾವಲಂಬಿಯಾಗಿ ಮಾಡಿದ್ದೇ ಸಹಕಾರ ಸಂಘಗಳು ಎಂದರು.

ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಮಾತನಾಡಿ, ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಬಳಿ ಕ್ರೋಢೀಕರಣಗೊಳ್ಳುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಇದರಿಂದ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಶ್ರಮಕ್ಕೆ ಅನುಗುಣವಾಗಿ ವೇತನ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಶ್ರಮಿಕ ವರ್ಗಕ್ಕೆ ಅಗತ್ಯ ಸೌಲಭ್ಯ ಸಿಗಬೇಕು. ಉತ್ತಮ ಜೀವನ ನಡೆಸಲು ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲ ಅವಶ್ಯಕಗಳನ್ನು ಪೂರೈಸಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಸಹಕಾರ ತತ್ವದಲ್ಲಿ ಎಲ್ಲರ ಅಭಿವೃದ್ಧಿ ಸಾಧ್ಯವಿದೆ. ಜನಸಂಖ್ಯೆಯೇ ಭಾರತದ ಸಂಪತ್ತಾಗಿದೆ. ಇಲ್ಲಿರುವ ಅಗಾಧ ಮಾನವ ಸಂಪನ್ಮೂಲವನ್ನು ಯೋಜಿತವಾಗಿ ಬಳಸಿಕೊಳ್ಳಬೇಕು. ಉದ್ಯೋಗ ಸೃಷ್ಟಿಯಾಗಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ರಾಜ್ಯ ಸಹಕಾರ ವ್ಯವಸ್ಥಾಪನಾ ಸಂಸ್ಥೆಯ ಪ್ರಾಂಶುಪಾಲ ಚಂದ್ರಶೇಖರ್, ಪ್ರೊ.ಎನ್.ಎಸ್.ಸುಷ್ಮಾ ಇದ್ದರು.

ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ: ಪ್ರೊ.ಎಸ್‌.ಮಹೇಂದ್ರ ಕುಮಾರ್ ಪ್ರತಿಪಾದನೆ

# ‘ಆರ್ಥಿಕತೆಗೆ ಸಹಕಾರ ಕ್ಷೇತ್ರ ಬೆನ್ನೆಲುಬು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಹಕಾರ ಕ್ಷೇತ್ರವು ರೈತರು, ಕಾರ್ಮಿಕರು ಸೇರಿದಂತೆ ಶ್ರಮಿಕ ವರ್ಗವನ್ನು ಸ್ವಾವಲಂಬಿಗಳನ್ನಾಗಿಸಿದೆ. ಜಿಡಿಪಿಯಲ್ಲಿ ಶೇ 13ರಷ್ಟು ಕೊಡುಗೆ ನೀಡಿ ದೇಶದ ಆರ್ಥಿಕತೆಯ ಬೆನ್ನೆಲುಬು’ ಎಂದು ಸಹಕಾರ ತಜ್ಞ ಪ್ರೊ.ಎಸ್. ಮಹೇಂದ್ರ ಕುಮಾರ್ ಪ್ರತಿಪಾದಿಸಿದರು.


ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯವು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸೋಮವಾರ ಆಯೋಜಿಸಿದ್ದ ‘ಸಹಕಾರ’ ಕುರಿತ ಚರ್ಚಾಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

‘ಬ್ರಿಟನ್‌ನ ಮ್ಯಾಂಚೆಸ್ಟರ್‌ನಲ್ಲಿ ಆರಂಭವಾದ ಸಹಕಾರ ಸಂಘಗಳ ಆಲೋಚನೆ ಜಗತ್ತಿನ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ. ಏಷ್ಯಾದ ಮೊದಲ ಪತ್ತಿನ ಸಹಕಾರ ಸಂಘವು 1904ರಲ್ಲಿ ಗದಗಿನ ಕನಗಿನಹಾಳದಲ್ಲಿ ರಚನೆಯಾಯಿತು. ಕಳೆದ ಶತಮಾನದಲ್ಲಿ ಸಹಕಾರ ಚಳವಳಿಯೇ ನಡೆದಿದ್ದು, ಲಕ್ಷಾಂತರ ಸಂಘಗಳು ಸ್ಥಾಪಿತವಾಗಿವೆ. ಕೋಟ್ಯಂತರ ಜನರಿಗೆ ನೇರ ಹಾಗೂ ಪರೋಕ್ಷ ಉದ್ಯೋಗ ನೀಡಿದೆ’ ಎಂದು ಸ್ಮರಿಸಿದರು.

‘ಗುಜರಾತ್‌ನ ಅಮುಲ್, ರಾಜ್ಯದ ಕೆಎಂಎಫ್ ಸೇರಿದಂತೆ ಹಾಲು ಒಕ್ಕೂಟಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಸವಾಲೊಡ್ಡುವಂತೆ ಬೆಳೆದಿವೆ. ಹೈನುಗಾರಿಕೆಯಷ್ಟೇ ಅಲ್ಲದೆ ಸಕ್ಕರೆ, ಖಾದಿ, ಸೆಣಬು, ಆಹಾರ ಧಾನ್ಯ, ರಸಗೊಬ್ಬರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಯೂ ಸಹಕಾರ ಸಂಘಗಳು ಸ್ಥಾಪನೆಯಾಗಿವೆ’ ಎಂದರು.

ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಎಂ.ಮಹದೇವನ್ ಮಾತನಾಡಿ, ‘ದೇಶದ ಸಂಪತ್ತು ಕೆಲವೇ ವ್ಯಕ್ತಿಗಳಲ್ಲಿ ಶೇಖರಗೊಳ್ಳುತ್ತಿದೆ. ಆರ್ಥಿಕ ಅಸಮಾನತೆ ಹೆಚ್ಚಳವಾಗುತ್ತಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ರಾಜ್ಯ ಸಹಕಾರ ವ್ಯವಸ್ಥಾಪನಾ ಸಂಸ್ಥೆಯ ಪ್ರಾಂಶುಪಾಲ ಚಂದ್ರಶೇಖರ್, ಪ್ರೊ.ಎನ್.ಎಸ್.ಸುಷ್ಮಾ ಇದ್ದರು.



ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸೋಮವಾರ ನಡೆದ ‘ಸಹಕಾರ’ ಕುರಿತ ಚರ್ಚಾಸ್ಪರ್ಧೆ ಉದ್ಘಾಟಿಸಿದ ಪ್ರೊ.ಎಸ್‌.ಮಹೇಂದ್ರ ಕುಮಾರ್ ಮಾತನಾಡಿದರು. ಡಾ. ಬಿ.ಎಸ್‌.ಚಂದ್ರಶೇಖರ್, ಚಂದ್ರಶೇಖರ್, ಪ್ರೊ.ಕೆ.ಎಂ.ಮಹದೇವನ್, ಪ್ರೊ.ಎನ್‌.ಎಸ್‌.ಸುಷ್ಮಾ ಇದ್ದರು —ಪ್ರಜಾವಾಣಿ ಚಿತ್ರ

ವಿಜಯ ಕರ್ನಾಟಕ
ನಮ್ಮ ಮೈಸೂರು
ಮಂಗಳವಾರ,7 ನವೆಂಬರ್ 2023

# ಸಹಕಾರ ಕ್ಷೇತ್ರದಿಂದ ಶ್ರಮಿಕರ ಸ್ವಾವಲಂಬನೆ

## ಸಹಕಾರ ತಜ್ಞ ಪ್ರೊ.ಎಸ್.ಮಹೇಂದ್ರ ಕುಮಾರ್ ಹೇಳಿಕೆ

■ **ವಿಕ ಸುದ್ದಿಲೋಕ** ಮೈಸೂರು

ಸಹಕಾರ ಕ್ಷೇತ್ರದಿಂದ ರೈತರು ಸೇರಿದಂತೆ ಶ್ರಮಿಕ ವರ್ಗ ಸ್ವಾವಲಂಬಿಯಾಗಿದೆ ಎಂದು ಸಹಕಾರ ತಜ್ಞ ಪ್ರೊ. ಎಸ್.ಮಹೇಂದ್ರ ಕುಮಾರ್ ಹೇಳಿದರು.

ನಗರದ ಮಾನಸಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಸೋಮವಾರ ಬೆಳಗ್ಗೆ ರಾಜ್ಯ ಸಹಕಾರ ಮಹಾಮಂಡಳ, ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯ ಸಂಯುಕ್ತಾಶ್ರಯದಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಸೋಮವಾರ ಆಯೋಜಿಸಿದ್ದ ಸಹಕಾರ ಕುರಿತ ಚರ್ಚಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದರು.

''ಸಹಕಾರ ಕ್ಷೇತ್ರವು ದೇಶದ ಜಿಡಿಪಿಯಲ್ಲಿ ಶೇ.13ರಷ್ಟು ಕೊಡುಗೆ ನೀಡಿದ್ದು, ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ,'' ಎಂದರು.

''ಸಹಕಾರ ಕ್ಷೇತ್ರದಿಂದ ಲಕ್ಷಾಂತರ ಮಂದಿ ನೇರವಾಗಿ ಮತ್ತು ಪರೋಕ್ಷವಾಗಿ ಉದ್ಯೋಗ ಪಡೆದಿದ್ದಾರೆ. ಹೈನುಗಾರಿಕೆಯಷ್ಟೇ ಅಲ್ಲದೆ ಸಕ್ಕರೆ, ಖಾದಿ, ಸೆಣಬು, ಆಹಾರ ಧಾನ್ಯ, ರಸಗೊಬ್ಬರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹಕಾರ ಸಂಘಗಳು ಸ್ಥಾಪನೆಯಾಗಿದೆ,'' ಎಂದರು.



ಕಾರ್ಯಕ್ರಮವನ್ನು ಸಹಕಾರ ತಜ್ಞ ಪ್ರೊ.ಎಸ್.ಮಹೇಂದ್ರ ಕುಮಾರ್ ಉದ್ಘಾಟಿಸಿದರು.

ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಮಾತನಾಡಿ, ''ಆರ್ಥಿಕ ಸಂಪತ್ತು ಕೆಲವೇ ವ್ಯಕ್ತಿಗಳಲ್ಲಿ ಸೇರುತ್ತಿರುವುದರಿಂದ ಆರ್ಥಿಕ ಅಸಮಾನತೆ ಹೆಚ್ಚಾಗಿದೆ,'' ಎಂದರು. ''ದುಡಿಮೆಗೆ ತಕ್ಕಂತೆ ಸಂಬಳ ಸಿಗಬೇಕು. ಶ್ರಮಿಕರಿಗೆ ಸೌಲಭ್ಯಗಳು ಸಿಗಬೇಕು. ಉತ್ತಮ ಜೀವನ ಶೈಲಿಗೆ ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಡಬೇಕು,'' ಎಂದರು. ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್, ರಾಜ್ಯ ಸಹಕಾರ ವ್ಯವಸ್ಥಾಪನಾ ಸಂಸ್ಥೆಯ ಪ್ರಾಂಶುಪಾಲ ಚಂದ್ರಶೇಖರ್, ಪ್ರೊ. ಎನ್.ಎಸ್.ಸುಷ್ಮಾ ಇದ್ದರು.






ಮೈಸೂರು ವಿಶ್ವವಿದ್ಯಾನಿಲಯ
ಕರ್ನಾಟಕ ರಾಜ್ಯ ಸಹಕಾರಿ
ಸ್ನಾತಕೋತ್ತರ ಮತ್ತು



# UNIVERSITY OF MYSORE

## DIRECTORATE OF STUDENT WELFARE

**Manasagangotri, Mysuru**

---

## REPORT

Debate Competition on 'Co-operation' subject was conducted in collaboration with Karnataka State Co-operative Department(R), Bengaluru for UG & PG Students of the University of Mysore on 16-02-2023 at E.M.R.C. Auditorium, Manasagangothri. Dr. G. Umesh, K.C.S, Co-Operation societies joint Providers, Mysore Division, Mysuru Inaugurated the competition.

The programme was presided over by Prof. Gopalappa D.V., DoS in Economics & Co-operation, Manasagangotri University of Mysore. And Sri Chandrashekar, Principal Karnataka Institute of Co-operative Management has participated as Chief Guests of this function. And Dr. S Mahendra Kumar Retired Prof. DoS in Economics & Co-operation, Manasagangotri University of Mysore, was Present with them and participated during the valedictory function and handed over the prizes to the winners. Three students from UG course and three students from PG course were given cash prizes.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ (ರಿ), ಬೆಂಗಳೂರು ಇವರ ಸಹಯೋಗದೊಂದಿಗೆ 16–02–2023ರಂದು ಇ.ಎಂ.ಆರ್.ಸಿ. ಸಭಾಂಗಣದಲ್ಲಿ 'ಸಹಕಾರ' ವಿಷಯ ಕುರಿತ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿತ್ತು. ಡಾ. ಜಿ. ಉಮೇಶ್, ಕೆ.ಸಿ.ಎಸ್., ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ವಿಭಾಗ, ಮೈಸೂರು ಅವರು ಸ್ಪರ್ಧೆಯನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಗೋಪಾಲಪ್ಪ ಡಿ.ವಿ., ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಚಂದ್ರಶೇಖರ್, ಪ್ರಾಂಶುಪಾಲರು, ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್‌ಮೆಂಟ್, ಮೈಸೂರು ಇವರು ಭಾಗವಹಿಸಿದ್ದರು. ಡಾ.ಎಸ್.ಮಹೇಂದ್ರಕುಮಾರ್, ನಿವೃತ್ತ ಪ್ರಾಧ್ಯಾಪಕರು, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಸದರಿ ಗಣ್ಯರು ಭಾಗವಹಿಸಿ, ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯನ್ನು ಮಾಡಿದರು.

Director of Student Welfare
University of Mysore, Mysore